# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2025–26ರ ಎಸ್,ಎಸ್,ಎಲ್,ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C MODEL QUESTION PAPER - 02 : 2025-26

**ವಿಷಯ : ದ್ವಿತೀಯ ಭಾಷೆ ಕನ್ನಡ**

**SUBJECT : Second Language Kannada**

**ಸಮಯ : 3 ಗಂಟೆ** | **ವಿಷಯ ಸಂಕೇತ : 33K**

**ಗರಿಷ್ಠ ಅಂಕಗಳು : 80** | **Subject Code : 33K**

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** 4x1=4

1. 'ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ' –
   ಎ) ಸ್ವರಗಳು
   ಬಿ) ಯೋಗವಾಹಗಳು
   ಸಿ) ಅನುನಾಸಿಕಗಳು
   ಡಿ) ವ್ಯಂಜನಗಳು
2. 'ಆತ್ಮಾರ್ಥಕ ಸರ್ವನಾಮ' ಪದವಿದು –
   ಎ) ಯಾರು?
   ಬಿ) ನಾನು
   ಸಿ) ತಾನು
   ಡಿ) ಮೂಡಣ
3. 'ವ' ಎಂಬುದು ಈ ಕಾಲವನ್ನು ಸೂಚಿಸುವ ಪ್ರತ್ಯಯವಾಗಿದೆ. –
   ಎ) ವರ್ತಮಾನಕಾಲ
   ಬಿ) ಭವಿಷ್ಯತ್‌ಕಾಲ
   ಸಿ) ಭೂತಕಾಲ
   ಡಿ) ಸಕಾಲ
4. 'ಅದ್ದರಿಂದ' ಪದವು ಈ ಅವ್ಯಯದ ಪದವಿದು–
   ಎ) ಸಂಬಂಧಾರ್ಥಕ ಅವ್ಯಯ
   ಬಿ) ಸಾಮಾನ್ಯ ಅವ್ಯಯ
   ಸಿ) ಕ್ರಿಯಾರ್ಥಕ ಅವ್ಯಯ
   ಡಿ) ಕೃದಂತ ಅವ್ಯಯ

**II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12x1=12**

5. 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ' ಪ್ರಕಾರ ಸಾಹಿತಿಗಳು ಕೃತಘ್ನರಾಗುವುದು ಯಾವಾಗ?
6. ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವ ಸಲುವಾಗಿ ಯಾವ ಪ್ರತಿಜ್ಞೆ ಮಾಡಿದರು?
7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
8. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು?
9. ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಹೇಗೆ ಕಾಣುತ್ತಿದ್ದವು?
10. ಹಾ,ಮಾ, ನಾಯಕರ ಪ್ರಕಾರ ರೋಗಿಗಳು ಯಾರ ಬಳಿ ಹೋಗುತ್ತಾರೆ?
11. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?
12. ತಿಮಿರದ ವೈರಿ ಯಾವುದು?
13. ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?
14. ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು?
15. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?
16. ಅರ್ಜುನ ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?
18. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?
19. ಹರಿದ್ವಾರಕ್ಕೆ ಕಪಿಲಸ್ಥಾನ ಎಂದು ಹೆಸರು ಬರಲು ಕಾರಣವೇನು?
20. ಸೌಜನ್ಯಶೀಲರ ಲಕ್ಷಣಗಳಾವುವು?
21. ಬಾಳೆಮೀನು ಬೊಬ್ಬೆ ಹೊಡೆಯಲು ಕಾರಣವೇನು?
22. ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದೆಗಳನ್ನು ಅಕ್ಕಮಹಾದೇವಿಯು ಯಾವುದಕ್ಕೆ ಹೋಲಿಸಿದ್ದಾರೆ?
23. ಶಿಷ್ಯನು 'ಪದ್ಮಪಾದಾಚಾರ್ಯ'ನೆಂದು ಹೇಗೆ ವಿಖ್ಯಾತನಾದನು ಎಂಬುದನ್ನು ವಿವರಿಸಿ?
24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?

**IV ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **1x3=3**

25. 'ಕುವೆಂಪು'

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **1x3=3**

**26.** ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ
ನೆಲಮುಗಿಲ ವಾಲಗವೆ ನಡೆದಂತಿದೆ.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **1x3=3**

27. 'ಸೀತೆಯ ಮುಖಕಮಲ ಅರಳಿತು'

**VII ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ.** **1x3=3**

28. ಮನಸ್ಸಿದ್ದರೆ ಮಾರ್ಗ

ಅಥವಾ

ತುಂಬಿದ ಕೊಡ ತುಳುಕುವುದಿಲ್ಲ

**VIII ಕೆಳಗಿನ ವಾಕ್ಯ ಅಥವಾ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. "ನೆರಳು ಕೊಡುವ ವರವನ್ನು ದಯಪಾಲಿಸು."

30. "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ."

31. "ಮಕ್ಕಳೇ ಒಂದು ಐದು ನಿಮಿಷ ಇರಿ."

32. "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು."

33. "ಶಿವ ಶಿವ ಕಾದಿಗೆಲಿದೆವು."

**IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಕೆಸರೊಳಿದ್ದರು ________________

________________________

________________________

________________ ಸಾರ್ಥಕತೆಗೆ

ಅಥವಾ

ಒಂದು ಬಾಣಕೆ ____________________

______________________________

______________________________

______________________ಹಗಲಿರುಳು.

**X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಸಿದ್ಧಾರ್ಥ ಬುದ್ಧನಾದ ಪರಿ ಹೇಗೆ ಎನ್ನುವ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಥವಾ

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡುಬಂದಿತು ಎಂಬುದನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1x4=4(2+2)**

36. ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ದೇಶೀ ಕಲೆಯಾಗಿದ್ದು ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರು ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ. ಆದ್ದರಿಂದ ಬಯಲಾಟ, ಯಕ್ಷಗಾನ ಕಲಿಸುವವನೇ ಭಾಗವತ –ನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ. ಗೀತೆ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ ಬಯಲಾಟದ ಪಂಚ ಅಂಗ –ಗಳು. ಹಾಡುಗಾರಿಕೆ ಹಾಗೂ ಕುಣಿತ ಯಕ್ಷಗಾನದ ಪ್ರಮುಖ ಅಂಗಗಳು. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆ ಪ್ರೇಕ್ಷಕರನ್ನು ತನ್ಮಯಗೊಳಿಸುತ್ತದೆ. ಇದರಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ರಾಮಾಯಣ ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಆಡಲಾಗುತ್ತದೆ. ಸಾಮಾನ್ಯವಾಗಿ ಕಾಳಗ, ಸಂಹಾರ ಮತ್ತು ಕಲ್ಯಾಣಗಳಿಗೆ ಸಂಬಂಧಪಟ್ಟ ಪ್ರಸಂಗಗಳೇ ಹೆಚ್ಚು. ಕಾಳಗವಿಲ್ಲದ ಯಕ್ಷಗಾನವಾಗಲೀ, ಬಯಲಾಟವಾಗಲೀ ಇಲ್ಲ. ಯಕ್ಷಗಾನದಲ್ಲಿ ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರಧಾನವಾದವುಗಳು. ಚಂದ್ರಾವಳಿ ವಿಲಾಸ, ರತಿಕಲ್ಯಾಣ, ರತ್ನಾವತಿ ಕಲ್ಯಾಣ, ಮೊದಲಾದ –ವುಗಳು ರಸ ಪ್ರಧಾನ ಪ್ರಸಂಗಗಳು. ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರಮಹಾತ್ಮೆಗಳಿವೆ. ಯಕ್ಷಗಾನದ ಎಲ್ಲ ಪ್ರಸಂಗದಲ್ಲೂ ಹಾಸ್ಯ ಕಂಡು ಬರುತ್ತದೆ. ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿವೆ. ಯಕ್ಷಗಾನ ಪ್ರಸಂಗ ರಚಿಸಿದವರು ದುಷ್ಟನಿಗ್ರಹ ಶಿಷ್ಟಪರಿಪಾಲನೆ ತತ್ವಗಳನ್ನು ಪ್ರಸಂಗದಲ್ಲಿ ಅಳವಡಿಸಿರುತ್ತಾರೆ.

ಪ್ರಶ್ನೆಗಳು

ಅ) ಯಕ್ಷಗಾನದಲ್ಲಿ ಕಂಡು ಬರುವ ವೀರರಸ ಪ್ರಧಾನ ಮತ್ತು ರಸಪ್ರಧಾನ ಕಾಳಗಗಳಾವುವು?

ಆ) ಯಕ್ಷಗಾನಕ್ಕೆ ಬಯಲಾಟ, ಭಾಗವತರಾಟ ಎಂಬ ಹೆಸರುಗಳು ಹೇಗೆ ಬಂದಿವೆ?

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1x4=4**

37. 'ಪರಿಸರ ಸಂರಕ್ಷಣೆಯಲ್ಲಿ ನಮ್ಮೆಲ್ಲರ ಪಾತ್ರ'

ಅಥವಾ

'ಮೂಢನಂಬಿಕೆಗಳು'

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x5=5**

38. ನಿಮ್ಮನ್ನು ಯಾದಗಿರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ **'ಮೋಹನ'** ಎಂದು ಭಾವಿಸಿಕೊಂಡು ನಿನ್ನ ವರ್ಗಾವಣೆ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ರಾಯಚೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ **'ಭಾರ್ಗವ'** ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾಮಿ ವಿವೇಕಾನಂದ ಜಯಂತಿಯ ಕುರಿತು ಮೈಸೂರಿನ ಜಯಚಾಮರಾಜ ಬಡಾವಣೆಯಲ್ಲಿ ವಾಸವಾಗಿರುವ **'ಶರಣಕುಮಾರ'** ಎಂಬ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**********************

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2025–26ರ ಎಸ್,ಎಸ್,ಎಲ್,ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C MODEL QUESTION PAPER - 01 : 2025-26

**ವಿಷಯ : ದ್ವಿತೀಯ ಭಾಷೆ ಕನ್ನಡ**

**SUBJECT : Second Language Kannada**

**ಸಮಯ : 3 ಗಂಟೆ** | **ವಿಷಯ ಸಂಕೇತ : 33K**

**ಗರಿಷ್ಠ ಅಂಕಗಳು : 80** | **Subject Code : 33K**

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. **'ಬನ್ನಿಬನ್ನಿ'** ಎನ್ನುವುದು
   ಎ) ನುಡಿಗಟ್ಟು
   ಬಿ) ಅನುಕರಣಾವ್ಯಯ
   ಸಿ) ಜೋಡುನುಡಿ
   ಡಿ) ದ್ವಿರುಕ್ತಿ
2. **'ಮಹೋತ್ಸವ'** ಪದವು ಉದಾಹರಣೆಯಾಗಿರುವ ಸಂಧಿ
   ಎ) ಲೋಪ ಸಂಧಿ
   ಬಿ) ಆಗಮ ಸಂಧಿ
   ಸಿ) ಗುಣ ಸಂಧಿ
   ಡಿ) ಆದೇಶ ಸಂಧಿ
3. **'ಮರವನ್ನು'** ಪದದಲ್ಲಿರುವ ವಿಭಕ್ತಿ
   ಎ) ದ್ವಿತೀಯಾ
   ಬಿ) ಚತುರ್ಥಿ
   ಸಿ) ಷಷ್ಠಿ
   ಡಿ) ಸಪ್ತಮಿ
4. ಆರು ಸಾಲುಗಳುಳ್ಳ ಪದ್ಯವನ್ನು ಹೀಗೆ ಕರೆಯುತ್ತಾರೆ
   ಎ) ಕಂದ ಪದ್ಯ
   ಬಿ) ಷಟ್ಪದಿ
   ಸಿ) ತ್ರಿಪದಿ
   ಡಿ) ರಗಳೆ

**II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12x1=12**

5. ಈ ನಾಡಿನ ಬೆನ್ನೆಲುಬು ಯಾರು?
6. ಶ್ರೇಷ್ಠ ಗುರುವಿನಲ್ಲಿ ಎಂಥಹ ಶಕ್ತಿ ಇರುತ್ತದೆ?
7. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?
8. ಹರಿದ್ವಾರದಲ್ಲಿ ಏನನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು?
9. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು?
10. ಹಾ,ಮಾ, ನಾಯಕರ ಪ್ರಕಾರ ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ?
11. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?
12. ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾರೆ?
13. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?
14. ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ?
15. ಅಕ್ಕ ಮಹಾದೇವಿಯವರು ಹೇಳಿದಂತೆ ಸಂತೆಯೊಳಗೊಂದು ಮನೆಯ ಮಾಡಿದರೆ ಯಾವುದಕ್ಕೆ ನಾಚಬಾರದು?
16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8x2=16**

17. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?
18. ಹಕ್ಕಿಗೂಡಿನ ವಿಶೇಷತೆಗಳನ್ನು ತಿಳಿಸಿ.
19. ಹರಿದ್ವಾರವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ?
20. ಸಮಾಜ ಜೀವನದ ಪ್ರಧಾನ ಲಕ್ಷಣಗಳಾವುವು?
21. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು?
22. ವೇಷ ಆಚರಣೆಯ ಬಗ್ಗೆ ಸಿದ್ಧರಾಮರ ಚಿಂತನೆಯನ್ನು ತಿಳಿಸಿ.
23. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಮೂಡಿದ ವಿಚಾರಗಳೇನು?
24. ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

**IV ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **1x3=3**

25. 'ಅ, ರಾ, ಮಿತ್ರ'

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **1x3=3**

**26.** ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು?

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **1x3=3**

27. 'ಕುಣಿಗಲ್ ಕೆರೆಯು ಬಾಳೆ ಹಣ್ಣಿನಂತೆ ಬಾಗಿದೆ'

**VII ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ.** **1x3=3**

**28**. 'ಶಕ್ತಿಗಿಂತ ಯುಕ್ತಿ ಮೇಲು'

ಅಥವಾ

'ತಾಳಿದವನು ಬಾಳಿಯಾನು'

**VIII ಕೆಳಗಿನ ವಾಕ್ಯ ಅಥವಾ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. "ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು".
30. "ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗಿರುತ್ತಾರೆ"
31. "ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ?"
32. "ಎಲ್ಲರೆದೆಗಳ ತುಂಬ ಸವಿಚೈತ್ರವು"
33. "ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ"

**IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

**34**. ಏಕಾಂಗಿ ----------------------------

--------------------------------

--------------------------------

------------------------- ನಡೆದನು.

**ಅಥವಾ**

ಕಾಡು ಕಾಡು ----------------------

---------------------------------

---------------------------------

-------------------------- ಕಂಡಿತು

**X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

ಅಥವಾ

ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ** **1x4=4(2+2)**

36. ಮಾತು ಮುತ್ತೂ ಹೌದು, ಮಾತು ಗಡಿಗೆಯ ತೂತು ಹೌದು. ಮಾತು ಮಾಣಿಕ್ಯವನ್ನೂ ತರಬಲ್ಲದು; ಜಗಳವನ್ನೂ ತರಬಲ್ಲದು. ಮನಸ್ಸನ್ನು ಒಡೆಯಲೂ ಬಲ್ಲದು; ಒಂದುಗೂಡಿಸಲೂ ಬಲ್ಲದು. ಇದಕ್ಕೆ ಉದಾಹರಣೆ ಎಂಬಂತೆ ಅಕ್ಬರ ಮಹಾರಾಜನಿಗೆ ಒಂದು ರಾತ್ರಿ ಕನಸು ಬಿದ್ದಿತು. ಆ ವಿಲಕ್ಷಣ ಕನಸಿನಲ್ಲಿ ಅವನ ಒಂದು ಹಲ್ಲು ಮಾತ್ರ ಉಳಿದು ಉಳಿದವೆಲ್ಲ ತಪತಪನೆ ಉದುರಿಹೋದವು. ಅವನಿಗೆ ತುಂಬಾ ದುಃಖವಾಯಿತು. ಆಸ್ಥಾನಕ್ಕೆ ಬಂದು ತನ್ನ ಕನಸಿನ ವಿಚಾರವನ್ನು ಮಂತ್ರಿಗಳು, ಪಂಡಿತರು, ಜ್ಯೋತಿಷ್ಯರು, ಶಾಸ್ತ್ರಜ್ಞರಿಗೆ ತಿಳಿಸಿ ಅದರ ಅರ್ಥವನ್ನು ಕೇಳಿದ. ಅವರೆಲ್ಲರೂ ಅದು ತುಂಬಾ ಕೆಟ್ಟ ಕನಸು. ನಿಮ್ಮ ಬಂಧು-ಬಳಗ, ಸಂಬಂಧಿಕರೆಲ್ಲ ನಿಮಗಿಂತ ಮೊದಲೇ ಸಾಯುತ್ತಾರೆ ಎಂಬುದು ಅದರ ಅರ್ಥವಾಗಿದೆ ಎಂದರು. ಇದನ್ನು ಕೇಳಿದ ಮಹಾರಾಜ ಇವರೆಲ್ಲ ಅಪಶಕುನದ ಮಾತು ಆಡಿದರೆಂದು ಕೋಪಗೊಂಡನು. ಅವರೆಲ್ಲರು ಸಪ್ಪೆ ಮೋರಿ ಹಾಕಿಕೊಂಡು ಬೀರಬಲ್ಲನ ಹತ್ತಿರ ಹೋಗಿ ನಡೆದ ವಿಚಾರವನ್ನು ಹೇಳಿದರು. ಮರುದಿನ ಅಕ್ಬರ ಆಸ್ಥಾನದಲ್ಲಿ ಬೀರಬಲ್ಲನ ಹತ್ತಿರ ತನ್ನ ಕನಸಿನ ವಿಚಾರ ಕೇಳಿದ. ಅದಕ್ಕೆ ಬೀರಬಲ್ಲ ಅದು ತುಂಬಾ ಒಳ್ಳೆಯ ಕನಸು ಎಂದನು. ಮಹಾರಾಜ ಸಂತೋಷದಿಂದ ಏನು ಅದರ ಅರ್ಥ ಎಂದು ಕೇಳಿದನು. ತಾವು ತಮ್ಮ ಬಂಧು-ಬಳಗ, ಸಂಬಂಧಿಕರಿಗಿಂತ ಹೆಚ್ಚು ಕಾಲ ಬಾಳುತ್ತೀರಿ ಎಂದನು. ಮಹಾರಾಜನ ಚಿಂತೆ ಮಾಯವಾಯಿತು. ಮುಖದ ಮೇಲೆ ಸಂತೋಷ ಉಕ್ಕಿತು. ಹರ್ಷದಿಂದ ಬೀರಬಲ್ಲನಿಗೆ ಬಹುಮಾನಕೊಟ್ಟು ಗೌರವಿಸಿದನು. ಅದಕ್ಕೇ "ಮಾತಿನಿಂದಲೇ ಹಗೆತನ, ಮಾತಿನಿಂದಲೇ ಸರ್ವಸಂದವು" ಎಂದು ಹಿರಿಯರು ಹೇಳಿದ್ದಾರೆ. ಸನ್ನಿವೇಶದ ಮರ್ಮವನ್ನು ಅರಿತು ಮಾತನಾಡುವುದನ್ನು ರೂಢಿಸಿಕೊಳ್ಳಬೇಕು.

ಪ್ರಶ್ನೆಗಳು :

ಅ. ಬೀರಬಲ್ಲ ಮಹಾರಾಜನ ಚಿಂತೆಯನ್ನು ಹೇಗೆ ದೂರು ಮಾಡಿದನು ?

ಆ. ಮಹಾರಾಜನು ಕೋಪಗೊಳ್ಳಲು ಕಾರಣವೇನು ?

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1x4=4**

37 ಗ್ರಾಮೀಣ ಬದುಕು

**ಅಥವಾ**

ಸ್ತ್ರೀ ಶಿಕ್ಷಣದ ಅವಶ್ಯಕತೆ

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x5=5**

38. ನೀವು ಹಾಸನ ಜಿಲ್ಲೆ ರಾಮನಾಥಪುರದಲ್ಲಿ ವಾಸವಾಗಿರುವ 'ರಚನಾ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ

**ಅಥವಾ**

ನೀವು ಮೈಸೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ಸಲ್ಮಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಬರುವಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಇರುವ ನಿಮ್ಮ ಗೆಳತಿ ರೇಷ್ಮಾಳಿಗೆ ಪತ್ರ ಬರೆಯಿರಿ.

***********************

Karnataka State Board

SSLC Examination

**Model Answers 2026**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

## KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## ಮಾದರಿ ಉತ್ತರಗಳು–ಪತ್ರಿಕೆ–01

## MODEL ANSWERS - PAPER-01

**ವಿಷಯ : ದ್ವಿತೀಯ ಭಾಷೆ ಕನ್ನಡ**

**SUBJECT : Second Language Kannada**

**ಸಮಯ : 3 ಗಂಟೆ** — **ವಿಷಯ ಸಂಕೇತ : 33K**

**ಗರಿಷ್ಠ ಅಂಕಗಳು : 80** — **Subject Code : 33K**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I | **ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)** | 4x1=4 |
| 1. | 1. **'ಬನ್ನಿಬನ್ನಿ'** ಎನ್ನುವುದು<br>ಎ) ನುಡಿಗಟ್ಟು ಬಿ) ಅನುಕರಣಾವ್ಯಯ ಸಿ) ಜೋಡುನುಡಿ ಡಿ) ದ್ವಿರುಕ್ತಿ<br>**ಉತ್ತರ :** ಡಿ) ದ್ವಿರುಕ್ತಿ | |
| 2. | 2. **'ಮಹೋತ್ಸವ'** ಪದವು ಉದಾಹರಣೆಯಾಗಿರುವ ಸಂಧಿ<br>ಎ) ಲೋಪ ಸಂಧಿ ಬಿ) ಆಗಮ ಸಂಧಿ ಸಿ) ಗುಣ ಸಂಧಿ ಡಿ) ಆದೇಶ ಸಂಧಿ<br>ಉತ್ತರ : ಸಿ) ಗುಣ ಸಂಧಿ | |
| 3. | 3. **'ಮರವನ್ನು'** ಪದದಲ್ಲಿರುವ ವಿಭಕ್ತಿ<br>ಎ) ದ್ವಿತೀಯಾ ಬಿ) ಚತುರ್ಥಿ ಸಿ) ಷಷ್ಠಿ ಡಿ) ಸಪ್ತಮಿ<br>ಉತ್ತರ : ಎ) ದ್ವಿತೀಯಾ | |
| 4. | 4. ಆರು ಸಾಲುಗಳುಳ್ಳ ಪದ್ಯವನ್ನು ಹೀಗೆ ಕರೆಯುತ್ತಾರೆ<br>ಎ) ಕಂದ ಪದ್ಯ ಬಿ) ಷಟ್ಪದಿ ಸಿ) ತ್ರಿಪದಿ ಡಿ) ರಗಳೆ<br>**ಉತ್ತರ :** ಬಿ) ಷಟ್ಪದಿ | |
| II | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | 12x1=12 |
| 5. | **5. ಈ ನಾಡಿನ ಬೆನ್ನೆಲುಬು ಯಾರು?**<br>**ಉತ್ತರ :**<br>ಈ ನಾಡಿನ ಬೆನ್ನಲುಬು ರೈತ(ಕೃಷಿಕ) | |
| 6. | **6. ಶ್ರೇಷ್ಠ ಗುರುವಿನಲ್ಲಿ ಎಂಥಹ ಶಕ್ತಿ ಇರುತ್ತದೆ?**<br>**ಉತ್ತರ :**<br>ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದಬಲ್ಲ ಹಾಗೂ ಅವರ ಅಭಿಲಾಷೆಗೆ ತಕ್ಕಂಥ ಜ್ಞಾನಕೊಡುವ ಶಕ್ತಿ ಇರುತ್ತದೆ. | |
| 7. | **7. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?**<br>**ಉತ್ತರ :**<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ ಮತ್ತು ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ. | |
| 8. | **8. ಹರಿದ್ವಾರದಲ್ಲಿ ಏನನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು?**<br>**ಉತ್ತರ :**<br>ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು. | |

| | | |
|---|---|---|
| 9. | **9. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು?**<br>**ಉತ್ತರ :**<br>ಗೋಪಾಲನು ಸಂಜೆಯ (ಬೈಗಿನ) ಸಮಯ ಕಾಡಿನ ದಾರಿಯಲ್ಲಿ ಒಬ್ಬನೇ ಶಾಲೆಯಿಂದ ಮನೆಗೆ ಬರುವಾಗ ಭಯ ಪಡುತ್ತಿದ್ದನು. | |
| 10. | **10. ಹಾ, ಮಾ, ನಾಯಕರ ಪ್ರಕಾರ ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ?**<br>**ಉತ್ತರ :**<br>ಹಾ,ಮಾ, ನಾಯಕರ ಪ್ರಕಾರ ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ | |
| 11. | **11. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?**<br>**ಉತ್ತರ :**<br>ಚೈತ್ರ ಮಾಸದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ. | |
| 12. | **12. ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾರೆ?**<br>**ಉತ್ತರ :**<br>ಕವಿ ಮಾನವನ ಬದುಕು ರವಿ ಕಿರಣಗಳಿಗೆ ಸದ್ದಿಲ್ಲದೆ ಕರಗುವ ಇಬ್ಬನಿಯಂತೆ ಶಾಂತವಾಗಿರಬೇಕೆಂದು ಬಯಸುತ್ತಾರೆ. | |
| 13. | **13. ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?**<br>**ಉತ್ತರ :**<br>ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವ ಬಂದರೆಂದು ಉತ್ಪ್ರೇಕ್ಷಿಸಲಾಗಿದೆ. | |
| 14. | **14. ಕೆರೆಗಳು ನಿಷ್ಪ್ರಯೋಜಕವಾಗುವುದು ಯಾವಾಗ?**<br>**ಉತ್ತರ :**<br>ಕೆರೆಗಳನ್ನು ತೋಡಿದ ಮೇಲೆ ಕೆರೆಯಲ್ಲಿ ನೀರು (ಪುಣ್ಯತೀರ್ಥ) ಬರದಿದ್ದಾಗ ಕರೆಗಳು ನಿಷ್ಪ್ರಯೋಜಕವಾಗುತ್ತವೆ. | |
| 15. | **15. ಅಕ್ಕಮಹಾದೇವಿಯವರು ಹೇಳಿದಂತೆ ಸಂತೆಯೊಳಗೊಂದು ಮನೆಯ ಮಾಡಿದರೆ ಯಾವುದಕ್ಕೆ ನಾಚಬಾರದು?**<br>**ಉತ್ತರ :**<br>ಅಕ್ಕಮಹಾದೇವಿಯವರು ಹೇಳಿದಂತೆ ಸಂತೆಯೊಳಗೊಂದು ಮನೆಯ ಮಾಡಿದರೆ ಶಬ್ದಕ್ಕೆ ನಾಚಬಾರದು | |
| 16. | **16. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?**<br>**ಉತ್ತರ :**<br>ಉತ್ತರನು ವಿಶಾಲವಾದ ಕೌರವನ ಸೈನ್ಯವನ್ನು ನೋಡಿ ಜೀವ ಭಯದಿಂದ ನಿಟ್ಟೋಟದಲ್ಲಿ ಓಡಿದನು. | |

| | | |
|---|---|---|
| **III** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)** | 8x2=16 |
| 17. | **17. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?**<br>**ಉತ್ತರ :**<br>ನಮ್ಮ ದೇಶದ ರಕ್ಷಣೆ ಮಾಡುವವರು ಸೈನಿಕರು. ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿಸಿ ಕೊಳ್ಳಬಹುದು. ಆದುದರಿಂದ ಸೈನಿಕರು ಪ್ರಬಲರಾಗಿದ್ದಾಗ ದೇಶದ ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನು ಹೊಡೆದು ಹಾಕಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು. | |

18.

**18. ಹಕ್ಕಿಗೂಡಿನ ವಿಶೇಷತೆಗಳನ್ನು ತಿಳಿಸಿ.**

**ಉತ್ತರ :**

ಹಕ್ಕಿಗಳು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ, ಬೇರಾವುದಕ್ಕೂ ಬಾರದು. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಆನೇಕ ವಸ್ತುಗಳನ್ನು ಸಮನ್ವಯಗೊಳಿಸಿ ಮನೆ ನಿರ್ಮಿಸುವ ಮನುಷ್ಯನ ಜಾಣ್ಮೆಯೂ ಕೆಲವೊಮ್ಮ ಈ ಚೋಟುದ್ದ ಹಕ್ಕಿಗಳ ಮುಂದೆ ನಾಚುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುವನ್ನು ಬಳಸಬಲ್ಲವು. ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಗೂಡನ್ನು ಅಂದಗೊಳಿಸುವ ಸೌಂದರ್ಯ ಪ್ರಜ್ಞೆಯೂ ಅವಕ್ಕಿದೆ. ಇವು ಹಕ್ಕಿಗೂಡಿನ ವಿಶೇಷತೆಗಳಾಗಿವೆ.

19.

**19. ಹರಿದ್ವಾರವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ?**

**ಉತ್ತರ :**

ಹರಿದ್ವಾರ ಎಲ್ಲಾ ತೀರ್ಥಕ್ಷೇತ್ರ ನಗರಗಳಂತೆ, ತನ್ನೊಳಗೆ ಪ್ರಾಚೀನತೆಯ ಲಕ್ಷಣಗಳನ್ನು ಉಳಿಸಿಕೊಂಡಿದೆ. ಎರಡೂ ಬದಿಗೆ ಎತ್ತರದ ಮನೆಗಳನ್ನು ಹಬ್ಬಿಸಿಕೊಂಡು ಇಕ್ಕಟ್ಟಾದ ಬೀದಿಗಳ ಸಾಲು; ನಡ ನಡುವೆ ತಟ್ಟನೆ ಕಣ್ಣನ್ನು ಸೆಳೆಯುವ ಗುಡಿಗಳು, ಆಶ್ರಮಗಳು, ಧರ್ಮಶಾಲೆಗಳು ಇತ್ಯಾದಿಗಳಿಂದ ಮತ್ತು ಎಲ್ಲಾ ತೀರ್ಥಕ್ಷೇತ್ರಗಳಿಗೂ ಸಮಾನ ಅಂಶವಾದ ಗಲೀಜುಗಳಿಂದ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಂಡಿದೆ ಎಂದು ಲೇಖಕರು ಹರಿದ್ವಾರವನ್ನು ವರ್ಣಿಸಿದ್ದಾರೆ.

20.

**20. ಸಮಾಜ ಜೀವನದ ಪ್ರಧಾನ ಲಕ್ಷಣಗಳಾವುವು?**

**ಉತ್ತರ :**

ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು; ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು. ಸ್ವಾರ್ಥಕ್ಕಾಗಿ ಹೋಗಬಹುದು, ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು. ಉದಾಹರಣೆಗೆ ಅಂಗಡಿಗೆ ಗ್ರಾಹಕರು, ರೋಗಿಗಳು ವೈದ್ಯರ ಬಳಿಗೆ, ಕಕ್ಷಿದಾರರು ವಕೀಲರಲ್ಲಿಗೆ, ಜನರು ಅಧಿಕಾರಿಗಳ ಬಳಿ ಹೋಗುತ್ತಾರೆ. ಮತ್ತು ಟಿಕೇಟ್ ಕೇಳಲು ಕಂಡಕ್ಟರ್ ಬಳಿಗೆ, ದೂರು ಕೊಡಲು ಪೊಲೀಸರ ಬಳಿ ಹೋಗುತ್ತಾರೆ. ಹಾಗೇ ಬಟ್ಟೆ ಹೊಲಿಸಿಕೊಳ್ಳಲು ದರ್ಜಿಯ ಹತ್ತಿರ ಹೋಗಬೇಕು. ಇದು ಸಮಾಜದ ಪ್ರಧಾನ ಲಕ್ಷಣವಾಗಿದೆ.

21.

**21. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು?**

**ಉತ್ತರ :**

ನೋಡುವವರಿಗೆ ಕುಣಿಗಲ್ ಕೆರೆಯು ವೈಭೋಗದಂತೆ ಕಾಣುತ್ತದೆ. ಕೆರೆಯಲ್ಲಿ ಮೂಡಿ ಬರುವ ಚಂದಿರನ ಪ್ರತಿಬಿಂಬ ಕೆರೆಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಕೆರೆಯು ಬಾಳೆಯ ಹಣ್ಣಿನಂತೆ ಬಾಗಿ ನಿಂಬೆಹಣ್ಣಿನಂತೆ ತುಂಬಿದೆ. ಕೆರೆಯ ದಂಡೆಯ ಮೇಲೆ ಸಂತೆಗೆ ಹೋಗುವ ದಾರಿ ಮತ್ತು ಅಲ್ಲಿರುವ ಕಲ್ಲಿನ ಕಟ್ಟೆಗಳು ಕೆರೆಯ ಅಂದವನ್ನು ಮತ್ತಷ್ಟು ಸುಂದರವಾಗಿ ಕಾಣುವಂತೆ ಮಾಡಿದೆ.

22.

**22. ವೇಷ ಆಚರಣೆಯ ಬಗ್ಗೆ ಸಿದ್ಧರಾಮರ ಚಿಂತನೆಯನ್ನು ತಿಳಿಸಿ.**

**ಉತ್ತರ :**

ಸಿದ್ಧರಾಮರು ಈ ವಚನದ ಮೂಲಕ ಮನುಷ್ಯನ ನಡೆ–ನುಡಿಗಳು ಒಂದಾಗಿರಬೇಕು. ಎಂಬುದನ್ನು ಅನೇಕ ಉದಾಹರಣೆಗಳ ಮೂಲಕ ತಿಳಿದ್ದಾರೆ. ವೇಷ ಧರಿಸಿದ ಮೇಲೆ ವೇಷದಂತೆ ಆಚರಣೆ ಇರಬೇಕು. ಇಲ್ಲದೆ ಹೋದರೆ ವೇಷಕ್ಕೂ ಆಚರಣೆಗೂ ಸಂಬಂಧವೇ ಇರುವುದಿಲ್ಲ, ವೇದಗಳನ್ನು ಅಧ್ಯಯನ ಮಾಡಿದ ಮೇಲೆ ಅದರಲ್ಲಿರುವ ಮೌಲ್ಯಗಳನ್ನು ತಿಳಿದು ಜೀವನದಲ್ಲಿ ಅಳವಡಿಸಿಕೊಂಡು ಜ್ಞಾನಿಯಾಗಬೇಕು. ಇಲ್ಲದಿದ್ದರೆ ಜೀವನ ವ್ಯರ್ಥವಾಗುತ್ತದೆ. ಕೆರೆಗಳನ್ನು ತೋಡಿದ ಮೇಲೆ ಅದರಲ್ಲಿ ನೀರು (ಪುಣ್ಯತೀರ್ಥ) ಬರದೆ ಹೋದರೆ ಕೆರೆಗಳನ್ನು ತೋಡಿದ್ದು ವ್ಯರ್ಥವೆನಿಸುತ್ತದೆ. ಆದ್ದರಿಂದ ನಮ್ಮ ನಡೆನುಡಿಗಳು ಒಂದಾಗಿರಬೇಕಂದು ಸಿದ್ಧರಾಮರು ಹೇಳಿದ್ದಾರೆ.

23.

**23. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಮೂಡಿದ ವಿಚಾರಗಳೇನು?**

**ಉತ್ತರ :**

"ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನು ಹಿಂಸಿಸದು. ಮನುಷ್ಯ? ಮನುಷ್ಯ ಸುಮ್ಮನೆ ಬಿಡುವನೆ? ಅವನ ಆಸೆಯ ಹಾವು ಯಾರೂ ಕೆಣಕದಿದ್ದರೂ ಎಲ್ಲರನ್ನು ಕಡಿಯುವುದು! ಕಳ್ಳನನ್ನು ಮೊದಲು ಮಾಡಿ ಸಾಮ್ರಾಟನವರೆಗೆ ಎಲ್ಲರಿಗೂ ಆಸೆ! ಎಲ್ಲರಿಗೂ ಸ್ವಾರ್ಥ–ಲೋಭ! ನಮ್ಮ ರತ್ನಳಿಗೆ ಏಕೆ ಇರಬಾರದು ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೆ? ಎಂಬ ವಿಚಾರಗಳು ಹಾವನ್ನು ಕಂಡು ವೈದ್ಯರ ತಲೆಯಲ್ಲಿ ಮೂಡಿದವು.

| | | |
|---|---|---|
| 24. | **24. ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**<br><br>**ಉತ್ತರ ಃ**<br>ಕನ್ನಡ ನಾಡಿನ ಜನರು ಹೇಳ ಬಯಸಿದ್ದನ್ನು ಹದವಾಗಿ ಹೇಳುತ್ತಾರೆ. ಹದವಾಗಿ ಹೇಳಿರುವುದನ್ನು ಶೋಧಿಸಿ ನೋಡುವ ಚತುರರು ಆಗಿದ್ದಾರೆ. ಉದ್ದೇಶ ಪೂರ್ವಕವಾಗಿ ಓದದಿದ್ದರೂ ಕಾವ್ಯ ಪ್ರಯೋಗ ಮಾಡುವಷ್ಟು ಪರಿಣಿತಿಯನ್ನು ಹೊಂದಿದ್ದಾರೆ ಎಂದು ಕವಿರಾಜಮಾರ್ಗಕಾರನು ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕುರಿತು ವರ್ಣಿಸಿದ್ದಾರೆ. | |
| IV<br><br><br><br><br><br>25. | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು:**<br>**ಜನ್ಮಸ್ಥಳ, ಕಾಲ**<br>**ಕೃತಿಗಳು, ಪ್ರಶಸ್ತಿಗಳು**<br>**ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ**<br>**ಒಟ್ಟು**<br><br>**25. 'ಅ, ರಾ, ಮಿತ್ರ'**<br><br>**ಉತ್ತರ ಃ**<br>ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣಮಿತ್ರ. ಇವರು 1935ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬ ಗ್ರಾಮದಲ್ಲಿ ಜನಿಸಿದರು. ಇವರು "ಆರತಕ್ಷತೆ ಮತ್ತು ಇತರ ಪ್ರಬಂಧಗಳು'. 'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು' 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತದ ಪಾತ್ರ-ಸಂಗತಿಗಳು', ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಯ ಬೆನ್ನೇರಿ'. 'ಕೈಲಾಸಂ ಬದುಕು-ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಹಾಗೂ ಧರ್ಮ ಶ್ರೀ ನಗೆರಾಜ ಪ್ರಶಸ್ತಿಗಳು ಸಂದಿವೆ. | 3x1=3<br>**1** ಅಂಕ<br>1 ಅಂಕ<br>1 ಅಂಕ<br>3 ಅಂಕಗಳು |
| V<br><br><br><br><br>**26.** | **ಪದ್ಯದ ಸಾರಾಂಶವನ್ನು ವಾಕ್ಯರಪದಲ್ಲಿ ಬರೆಯುವುದು:**<br>ಪಠ್ಯಾಂಶಕ್ಕೆ<br>ಪದ ಬಳಕೆ ಮತ್ತು ಶೈಲಿ<br>ಒಟ್ಟು<br><br>**26.** ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು<br>ದೀಪದೆದುರಿಗೆ ತಿಮಿರ ಸರಿಯುವಂತೆ<br>ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು;<br>ಕೂಗಾಡಿ, ಹಾರಾಡಿ ಫಲವದೇನು?<br>ಉತ್ತರ ಃ<br>ಈ ಪದ್ಯ ಭಾಗವನ್ನು ಸಿ.ಪಿ.ಕೃಷ್ಣಕುಮಾರ ಅವರು ಬರೆದ ಬೊಗಸೆ ಕವನ ಸಂಕಲನದಿಂದ ಆರಿಸಲಾದ ಸದ್ದು ಮಾಡದಿರು ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಕವಿ ಸಿ.ಪಿ.ಕೆ. ಅವರು ಸದ್ದು ಗದ್ದಲವೆಂಬ ಬಿರುದು ಪ್ರಶಸ್ತಿಗಳಿಲ್ಲದೆ (ಆಡಂಬರವಿಲ್ಲದೆ) ಜೀವನದ ಗುರಿ ಎಂಬ ಬಂದರನ್ನು ಸೇರು. ಹೇಗೆ ಆರತಿಯ ಕರ್ಪೂರವು ತಟ್ಟೆಯೊಳಗೆ ಕರಗುತ್ತದೆಯೋ, ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುತ್ತದೆಯೋ, ಅದರಂತೆ ನೀನು ಬದುಕಿನಲ್ಲಿ ನಿನ್ನ ಕರ್ತವ್ಯವನ್ನು ಶಾಂತ ರೀತಿಯಿಂದ ಮಾಡಿ ಮುಗಿಸಬೇಕು. ಮಾಡುವ ಕೆಲಸವನ್ನು ಯಾರಿಗೂ ಅರಿವಾಗದಂತೆ ಮಾಡಬೇಕು. ನಾವು ಮಾಡುವ ಕಾರ್ಯವನ್ನು ಕೂಗಾಡಿ ಹಾರಾಡಿ ಮಾಡುವುದರಿಂದ ಯಾವ ಫಲವಿಲ್ಲ ಎಂದು ಹೇಳಿದ್ದಾರೆ. | 3x1=3<br>1 ಅಂಕ<br>2 ಅಂಕ<br>3 ಅಂಕಗಳು |

| | | |
|---|---|---|
| VI<br><br><br><br>27. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು:**<br>**ಅಲಂಕಾರವನ್ನು ಹೆಸರಿಸುವುದು**<br>**ಲಕ್ಷಣ ಮತ್ತು ಸಮನ್ವಯಗೊಳಿಸುವುದು**<br>**ಒಟ್ಟು**<br>**27. 'ಕುಣಿಗಲ್ ಕೆರೆಯು ಬಾಳೆ ಹಣ್ಣಿನಂತೆ ಬಾಗಿದೆ'**<br><br>ಅಲಂಕಾರ ಃ ಉಪಮಾಲಂಕಾರ<br>ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುವರು.<br>ಉಪಮೇಯ ಃ – ಕುಣಿಗಲ್ ಕೆರೆ<br>ಉಪಮಾನ ಃ – ಬಾಳೆಯ ಹಣ್ಣು<br>ಉಪಮಾವಾಚಕ ಃ– ಅಂತೆ<br>ಸಮಾನ ಧರ್ಮ ಃ– ಬಾಗಿರುವುದು<br>ಸಮನ್ವಯತೆ ಃ ಉಪಮೇಯವಾದ 'ಕುಣಿಗಲ್‌ಕೆರೆ'ಯನ್ನು ಉಪಮಾನವಾದ 'ಬಾಳೆಹಣ್ಣಿಗೆ' 'ಅಂತೆ' ಎಂಬ ಉಪಮಾವಾಚಕದ ಮೂಲಕ "ಬಾಗಿರುವುದು' ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ. | 3x1=3<br>1 ಅಂಕ<br>2 ಅಂಕ<br>3 ಅಂಕಗಳು |
| VII<br><br><br><br><br>28 | ಗಾದೆಯನ್ನು ವಿಸ್ತರಿಸಿ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)<br>ಗಾದೆಯ ಮಹತ್ವದ ವಿವರಣೆ<br>ಉದಾಹರಣೆಯೊಂದಿಗೆ ಅರ್ಥ ವಿವರಣೆ<br>ಭಾಷಾ ಶೈಲಿಗೆ–ಪದಬಂಧಗಳಿಗೆ<br>ಒಟ್ಟು<br>**28**. 'ಶಕ್ತಿಗಿಂತ ಯುಕ್ತಿ ಮೇಲು'<br>ಅಥವಾ<br>'ತಾಳಿದವನು ಬಾಳಿಯಾನು' | 3x1=3<br>1 ಅಂಕ<br>1 ಅಂಕ<br>1 ಅಂಕ<br>3 ಅಂಕಗಳು |
| VIII<br><br><br><br><br>29.<br><br><br><br><br><br><br><br><br><br><br>30. | ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು:<br>ಕೃತಿ, ಕರ್ತೃ ಮತ್ತು ಪಠ್ಯದ ಹೆಸರು<br>ಯಾರು–ಯಾರಿಗೆ ಸಂದರ್ಭ<br>ಭಾಷಾ ಶೈಲಿ, ಪದಬಂಧಗಳಿಗೆ<br>ಒಟ್ಟು<br>**29. "ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು".**<br>**ಉತ್ತರ ಃ**<br>ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ರವರು ಬರೆದ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಪಂಚಾಕ್ಷರಿ ಗುರುಗಳು ಹಾಗೂ ಪುಟ್ಟರಾಜರ ಗುರು–ಶಿಷ್ಯರ ಸಂಬಂಧ ವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ 'ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೇ ನನಗೆ ಮಂತ್ರ. ಅವರ ನಡೆಯೇ ನನಗೆ ಆಚಾರವಾಗ ಬೇಕು' ಎಂದು ನಿರ್ಧರಿಸಿದ್ದನು. ತನ್ನ ಸಹಪಾಠಿಗಳಿಗಿಂತ ಬಲುಬೇಗ ಗುರುಗಳು ಹೇಳಿದ್ದನ್ನು ಗ್ರಹಿಸಿ ಕಲಿತುಕೊಂಡರು. 'ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು'. ಈ ಮಾತಿನಲ್ಲಿ ಗುರುಶಿಷ್ಯರ ನಡುವಿನ ಅವಿನಾಭಾವ ಸಂಬಂಧ ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ.<br><br>30. "ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗಿರುತ್ತಾರೆ"<br>ಉತ್ತರ ಃ<br>ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿರವರ ಕರುಣಾಳು ಬಾ ಬೆಳಕೆ ಅಂಕಣ ಬರೆಹದಿಂದ ಆರಿಸಲಾದ ಕಾಫೀ – ಕಪ್ಪು ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ. ಗುರು ಶಿಷ್ಯರ ಭಾವನಾತ್ಮಕ ಸಂಬಂಧ ಕುರಿತು ಹೇಳುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ. ಹಳೆಯ ವಿದ್ಯಾರ್ಥಿಗಳು ತಮ್ಮ ಹೆಡ್ ಮಾಸ್ತರರ ಮನೆಗೆ ಹೋದರು. ಅವರು ನಿವೃತ್ತಿಯಾಗಿ ಎಷ್ಟು ವರ್ಷಗಳಾದರೂ ವಿದ್ಯಾರ್ಥಿಗಳನ್ನು ನೋಡಿ ಸಂತೋಷಗೊಳ್ಳುತ್ತಾರೆ. ಅವರಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರೀಯರಾಗಿರುತ್ತಾರೆ. ಏಕೆಂದರೆ ಗುರುಗಳು ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡುತ್ತಾರೆ, ಬದುಕಿನ ಪಾಠ ಕಲಿಸುತ್ತಾರೆ. ಇಲ್ಲಿ ಗುರು–ಶಿಷ್ಯರ ಸಂಬಂಧ ಮತ್ತು ಮಾರ್ಗದರ್ಶನ ಅರ್ಥಪೂರ್ಣವಾಗಿದೆ. | 5x3=15<br>1 ಅಂಕ<br>1 ಅಂಕ<br>1 ಅಂಕ<br>3 ಅಂಕಗಳು |

31. **31. "ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ?"**

**ಉತ್ತರ :**
ಈ ವಾಕ್ಯವನ್ನು ಕುವೆಂಪುರವರ ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ
ಆ ಮಾತನ್ನು ಗೋಪಾಲನು ಹೇಳಿದನು. ಗೋಪಾಲನು ಇಳಿ ಸಂಜೆಯಲ್ಲಿ ಶಾಲೆಯಿಂದ ಮರಳುವಾಗ ಕಾಡಿನಲ್ಲಿ ಭಯವಾಗಿ ಅಮ್ಮನ ಮಾತಿನಂತೆ ಬನದ ಗೋಪಾಲನನ್ನು ಕೂಗಿ ಕರೆಯುತ್ತಾನೆ. ಬನದ ಗೋಪಾಲನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಗೋಪಾಲನು 'ಅಮ್ಮ ಹೇಳಿದ್ದಳು, ನನ್ನಣ್ಣ ಇಲ್ಲಿಯೇ ದನ ಕಾಯುತ್ತಿರುವನಂತೆ. ದನ ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ? ಅಮ್ಮ ಹೇಳಿದ್ದಾಳೆ, ಇಲ್ಲಿಯೇ ಇರುತ್ತಾನಂತೆ. ಅಮ್ಮನ ಮಾತು ಸುಳ್ಳಾಗದು' ಎಂದು ಹೇಳುತ್ತಾನೆ. ಇಲ್ಲಿ ಗೋಪಾಲನಿಗೆ ತನ್ನ ಅಮ್ಮನ ಮಾತಿನ ಮೇಲೆ ಇರುವ ನಂಬಿಕೆ ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

32. **32. "ಎಲ್ಲರೆದೆಗಳ ತುಂಬ ಸವಿಚೈತ್ರವು"**

**ಉತ್ತರಃ**
ಈ ವಾಕ್ಯವನ್ನು ಬಸವರಾಜ ಸಬರದ ಅವರ 'ಸಿಸಿಫಸರ ಸುತ್ತು' ಕವನ ಸಂಕಲನದಿಂದ ಆರಿಸಲಾದ 'ಸವಿಚೈತ್ರ' ಪದ್ಯದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ಕವಿ ಜನರ ಮೇಲೆ ಚೈತ್ರಮಾಸವು ಬೀರುವ ಪರಿಣಾಮವನ್ನು ಕುರಿತು ಹೇಳುತ್ತಾರೆ. ಯುಗಾದಿ ಹಳತನ್ನು ಮರೆತು ಹೊಸತನವನ್ನು ತರುವ ಸಂಭ್ರಮದ ದಿನ ಬದುಕಿನಲ್ಲಿ ಕಷ್ಟ ಸುಖಗಳನ್ನು ಸಮನಾಗಿ ಸ್ವಿಕರಿಸುವುದರ ಪ್ರತೀಕವಾಗಿ ಬೇವು–ಬೆಲ್ಲವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತೇವೆ. ಆದರೂ ಯುಗಾದಿಯಲ್ಲಿ ಕಷ್ಟದ ಪ್ರತೀಕವಾದ ಬೇವಿನ ಕಹಿ ಕಡಿಮೆಯಾಗಿ, ಸಂತೋಷದ ಪ್ರತೀಕವಾದ ಬೆಲ್ಲದ ಸಿಹಿ ಹೆಚ್ಚಾದಂತೆ ಎಲ್ಲಾ ಜೀವಸಂಕುಲ ಉತ್ಸಾಹದಿಂದ ಇರುತ್ತದೆ. ಎಂದು ಕವಿ ವರ್ಣಿಸುವಾಗ ಎಲ್ಲರೆದೆಗಳ ತುಂಬ ಸವಿಚೈತ್ರವು ಎಂದು ಹೇಳಿದ್ದಾರೆ. ಇಲ್ಲಿ ಚೈತ್ರದ ವರ್ಣನೆ ಸ್ವಾರಸ್ಯಕರವಾಗಿದೆ.

33. **33. "ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ"**

**ಉತ್ತರ :**
ಪ್ರಸ್ತುತ ಈ ವಾಕ್ಯವನ್ನು ಕವಿ ಗದುಗಿನ ನಾರಾಣಪ್ಪ ರಚಿಸಿದ 'ಕರ್ನಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆರಿಸಲಾದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಯುದ್ಧಭೂಮಿಗೆ ಬೆನ್ನು ತೋರಿಸಿ ರಥದಿಂದ ಇಳಿದು ಓಡುತ್ತಿರುವ ಉತ್ತರನಿಗೆ ಅರ್ಜುನ ಹೇಳುವ ಮಾತು ಇದಾಗಿದೆ. ಉತ್ತರನು ರಥದಿಂದ ಇಳಿದು ಓಡುತ್ತಿರುವಾಗ ಅವನನ್ನು ಹಿಂಬಾಲಿಸಿ ಹಿಡಿದು ನಿಲ್ಲಿಸಿದಾಗ ಅಂಜುಬುರುಕ ನರಿಯಂತೆ ಹಲ್ಲು ಕಿರಿಯುತ್ತಾ ನಿಂತಿರುತ್ತಾನೆ. ಆಗ ಅರ್ಜುನ ಉತ್ತರನಿಗೆ ಯುದ್ಧ ಮಾಡು ನಡೆ ಎಂದು ಗದರಿಸುವಾಗ ಈ ಮಾತು ಬಂದಿದೆ. ಇಲ್ಲಿ ಉತ್ತರನ ಹೇಡಿತನ ಹಾಸ್ಯಮಯವಾಗಿ ಮೂಡಿ ಬಂದಿದೆ.

IX **ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯುವುದುಃ** 1x4=4
**(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)**

34. **34.** ಏಕಾಂಗಿ ––––––––––––––––––––––––––
––––––––––––––––––––––––––––––
––––––––––––––––––––––––––––––
––––––––––––––––––––––– ನಡೆದನು.

**ಅಥವಾ**

ಕಾಡು ಕಾಡು ––––––––––––––––––––––
––––––––––––––––––––––––––––––
––––––––––––––––––––––––––––––
–––––––––––––––––––––––– ಕಂಡಿತು

**ಉತ್ತರ ៖**

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು.
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು.
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು.
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

**ಅಥವಾ**

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡೊಂದು ದೂರದಲ್ಲಿ ಕೇಳಿತು
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.

X **ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸುವುದು:** 1X4=4

**ವಿಷಯಾಂಶಕ್ಕೆ** 3 ಅಂಕಗಳು
**ಭಾಷಾಶೈಲಿ, ಪದ ಬಳಕೆಗೆ** 1 ಅಂಕ
**ಒಟ್ಟು** 4 ಅಂಕಗಳು

35. **35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ**

**ಅಥವಾ**

**ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ**

**ಉತ್ತರಃ**

ಕವಿ ಗೋಪಾಲಕೃಷ್ಣ ಅಡಿಗರು ಹೇಳಿದಂತೆ ಜೀವನದಲ್ಲಿ ಒಂದೇ ಒಂದು ಹೆಗ್ಗುರಿಯನ್ನು ಇಟ್ಟು ಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ಒಂದು ಬಾಣಕ್ಕೆ ಗುರಿ ಒಂದೇ ಇರುವಂತೆ, ಒಂದು ದೇಹದಲ್ಲಿ ಆತ್ಮ ಒಂದೇ ಇರುವಂತೆ, ಜೀವನಕ್ಕೂ ಒಂದೇ ಗುರಿ ಇರಬೇಕೆಂದು ಹೇಳುತ್ತಾರೆ ನಾವು ಇಟ್ಟುಕೊಂಡ ಗುರಿ ನಮಗೂ, ದೇಶಕ್ಕೂ ಒಳ್ಳೆಯದನ್ನು ಬಯಸುವಂತಿರಬೇಕು. ಸ್ವಾರ್ಥಿಗಳಾಗಬಾರದು. ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು. ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದವಳನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿ ಸೇರಿ ಜೀವನ ಸಾರ್ಥಕ ಮಾಡಿಕೊಳ್ಳತ್ತದೆ. ಅದೇ ರೀತಿ ಮಾನವನು ಅಚಲವಾದ ಹೆಗ್ಗುರಿಯನ್ನು ಹೊಂದಿ ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಪಥದಲ್ಲಿ ಯಾವುದೇ ಅಡ್ಡಿ–ಆತಂಕಗಳು ಬಂದರೆ ಅವುಗಳಿಗೆ ಹೆದರದೆ, ಧೃತಿಗೆಡದೆ ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಹಾಗೆಯೇ ಮಾನವನು ತನ್ನ ಕೀಳಿರಿಮೆಯನ್ನು ತೊರೆದು, ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ.

ಅಥವಾ

**ಉತ್ತರ.**

ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಠವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.

| | | |
|---|---|---|
| XI | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು: (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**<br>36 <u>ಪ್ರಶ್ನೆಗಳು</u><br>**ಅ) ಬೀರಬಲ್ಲ ಮಹಾರಾಜನ ಚಿಂತೆಯನ್ನು ಹೇಗೆ ದೂರು ಮಾಡಿದನು?**<br>**ಉತ್ತರ :**<br>ಅಕ್ಬರ ಆಸ್ಥಾನದಲ್ಲಿ ಬೀರಬಲ್ಲನ ಹತ್ತಿರ ತನ್ನ ಕನಸಿನ ವಿಚಾರ ಕೇಳಿದ. ಅದಕ್ಕೆ ಬೀರಬಲ್ಲ ಅದು ತುಂಬಾ ಒಳ್ಳೆಯ ಕನಸು ಎಂದನು. ಮಹಾರಾಜ ಸಂತೋಷದಿಂದ ಏನು ಅದರ ಅರ್ಥ ಎಂದು ಕೇಳಿದನು. ತಾವು ತಮ್ಮ ಬಂಧು–ಬಳಗ, ಸಂಬಂಧಿಕರಿಗಿಂತ ಹೆಚ್ಚು ಕಾಲ ಬಾಳುತ್ತೀರಿ ಎಂದನು. ಇದನ್ನು ಕೇಳಿ ಮಹಾರಾಜನ ಚಿಂತೆ ಮಾಯವಾಯಿತು. ಮುಖದ ಮೇಲೆ ಸಂತೋಷ ಉಕ್ಕಿತು.<br>**ಆ) ಮಹಾರಾಜನು ಕೋಪಗೊಳ್ಳಲು ಕಾರಣವೇನು?**<br>**ಉತ್ತರ :**<br>ಅಕ್ಬರ ಮಹಾರಾಜನಿಗೆ ಒಂದು ರಾತ್ರಿ ಕನಸು ಬಿದ್ದಿತು. ಆ ವಿಲಕ್ಷಣ ಕನಸಿನಲ್ಲಿ ಅವನ ಒಂದು ಹಲ್ಲು ಮಾತ್ರ ಉಳಿದು ಉಳಿದವೆಲ್ಲ ತಪತಪನೆ ಉದುರಿಹೋದವು. ಅವನಿಗೆ ತುಂಬಾ ದುಃಖವಾಯಿತು. ಆಸ್ಥಾನಕ್ಕೆ ಬಂದು ತನ್ನ ಕನಸಿನ ವಿಚಾರವನ್ನು ಮಂತ್ರಿಗಳು, ಪಂಡಿತರು, ಜ್ಯೋತಿಷ್ಯರು, ಶಾಸ್ತ್ರಜ್ಞರಿಗೆ ತಿಳಿಸಿ ಅದರ ಅರ್ಥವನ್ನು ಕೇಳಿದ. ಅವರೆಲ್ಲರೂ ಅದು ತುಂಬಾ ಕೆಟ್ಟ ಕನಸು. ನಿಮ್ಮ ಬಂಧು–ಬಳಗ, ಸಂಬಂಧಿಕರೆಲ್ಲ ನಿಮಗಿಂತ ಮೊದಲೇ ಸಾಯುತ್ತಾರೆ. ಎಂಬುದು ಅದರ ಅರ್ಥವಾಗಿದೆ ಎಂದರು. ಇದನ್ನು ಕೇಳಿದ ಮಹಾರಾಜ ಇವರೆಲ್ಲ ಅಪಶಕುನದ ಮಾತು ಆಡಿದರೆಂದು ಕೋಪಗೊಂಡನು. | 1x4=4<br>(2+2) |
| XII<br><br><br><br>37. | ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)<br>ಪೀಠಿಕೆ / ಪ್ರಸ್ತಾವನೆ<br>ವಿಷಯ ನಿರೂಪಣೆ<br>ಭಾಷೆಶೈಲಿಗೆ, ಮುಕ್ತಾಯ / ಉಪಸಂಹಾರ<br>37 ಗ್ರಾಮೀಣ ಬದುಕು<br>**ಅಥವಾ**<br>ಸ್ತ್ರೀ ಶಿಕ್ಷಣದ ಅವಶ್ಯಕತೆ | 1x4=4<br>1 ಅಂಕ<br>2 ಅಂಕಗಳು<br><u>1 ಅಂಕ</u><br><u>4 ಅಂಕಗಳು</u> |
| XIII | **ಪತ್ರ ಲೇಖನ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)**<br>38. ನೀವು ಹಾಸನ ಜಿಲ್ಲೆ ರಾಮನಾಥಪುರದಲ್ಲಿ ವಾಸವಾಗಿರುವ 'ರಚನಾ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ<br>**ಅಥವಾ**<br>ನೀವು ಮೈಸೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸಲ್ಮಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಬರುವಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಇರುವ ನಿಮ್ಮ ಗೆಳತಿ ರೇಷ್ಮಾಳಿಗೆ ಪತ್ರ ಬರೆಯಿರಿ.<br>**ವೈಯಕ್ತಿಕ ಪತ್ರ :**<br>ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ<br>ಪತ್ರದ ಒಡಲು<br>ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ<br>ವಿನ್ಯಾಸ, ಪದಬಳಕೆ, ಶೈಲಿ<br>ಒಟ್ಟು<br>ಅಥವಾ<br>**ವ್ಯಾವಹಾರಿಕ ಪತ್ರ :**<br>ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ<br>ಪತ್ರದ ಒಡಲು<br>ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ<br>ವಿನ್ಯಾಸ, ಪದಬಳಕೆ, ಶೈಲಿ<br>ಒಟ್ಟು | 1x5=5<br><br>1 ಅಂಕ<br>2 ಅಂಕಗಳು<br>1 ಅಂಕ<br><u>1 ಅಂಕ</u><br><u>5 ಅಂಕಗಳು</u><br><br>1 ಅಂಕ<br>2 ಅಂಕಗಳು<br>1 ಅಂಕ<br><u>1 ಅಂಕ</u><br><u>5 ಅಂಕಗಳು</u> |